O.S 20/2022
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 19/*06/*2025

**ಪಾಟೀ ಸವಾಲುಃ ಶ್ರೀ ಬಿ ಎ ಬಿ ವಕೀಲರಿಂದಃ**

ನಿ ಪಿ 8 ರಿಂದ 11 ರ ನಾಲ್ಕು ಕ್ರಯಪತ್ರಗಳನ್ನು ನನ್ನ ದೊಡ್ಡಪ್ಪನವರು ನನಗೆ ಕೊಟ್ಟಿರುತ್ತಾರೆ. ಸದರಿ ಕ್ರಯಪತ್ರಗಳನ್ನು ಅವರು ಎಲ್ಲಿಂದ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಗಳು ಯಾವ ದಿನಾಂಕಗಳಂದು ಮತ್ತು ಯಾರ ಮದ್ಯ ಕ್ರಯ ಆಗಿರುತ್ತದೆ ಎಂದು ನನಗೆ ನೆನಪಿಲ್ಲ.

2. ನಿ ಪಿ 8 ರಿಂದ 11 ರ ಕ್ರಯಪತ್ರಗಳಲ್ಲಿರುವ ಅಂಶಗಳು ನನಗೆ ತಿಳಿದಿಲ್ಲ ಮತ್ತು ನನ್ನ ದೊಡ್ಡಪ್ಪನವರು ನನಗೆ ಕೊಟ್ಟ ಕಾರಣ ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರಿಸಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಸದರಿ ಕ್ರಯಪತ್ರಗಳು 1991 ಮತ್ತು 1992 ರ ಕ್ರಯಪತ್ರಗಳಾಗಿರುತ್ತವೆ ಎನ್ನುತ್ತಾರೆ. ಸದರಿ ಕ್ರಯಪತ್ರಗಳನ್ನು ನಾನು ಓದಿಲ್ಲ ಎಂದರೆ ಸರಿ. ಸದರಿ ಕ್ರಯಪತ್ರಗಳು ಈ ದಾವೆಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳಲ್ಲಿರುವ ವ್ಯಕ್ತಿಗಳನ್ನು ಈ ದಾವೆಯಲ್ಲಿ ಸೇರಿಸುತ್ತೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ.

3. ಸದರಿ ದಾವೆಯ ನಾನು ಪ್ರತಿವಾದಿಗಳ ವಿರುದ್ದ ಅವರ ಸ್ವಯಾರ್ಜಿತ ಆಸ್ತಿಯನ್ನು ಪಡೆಯಲು ಹೂಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಕ್ತಾಯಃ**

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

**ಹೊಳೆನರಸೀಪುರ**

O.S 20/2022
PW-1